

ನೋವೆಲ್ಲ ತಿಳಿಯಾಗಿ ನಗುವಾಗಿ... ಶಕ್ತಿ ಅವರೊಂದಿಗೆ ನರ್ತಕಿ ನಟರಾಜ್

ಬಿಡುಗಣ್ಣಿನಿಂದ ಹುಡುಕಿ ಓದುತ್ತಿದ್ದೆ. ತಂಜಾವೂರು ಶೈಲಿಯ ಭರತನಾಟ್ಯ ಪ್ರಚಲಿತಕ್ಕೆ ಬರುವ ಮುನ್ನ ಇದ್ದ ಕೃತಿಗಳನ್ನು ಓದಲು ಶುರು ಮಾಡಿದೆ. ಸಂಗಂ ಸಾಹಿತ್ಯ, ಶಿಲಪ್ಪದಿಕಾರಂ, ಶೈವ ಸಾಹಿತ್ಯ, ವೈಷ್ಣವ ಸಾಹಿತ್ಯ ಪ್ರಬಂಧಗಳು, ತೇವಾರಂ, ತಿರುವಾಚಕಂ ತಿರುಪ್ಪುರಂ – ಹೀಗೆ ತಮಿಳು ಸಾಹಿತ್ಯದ ಹರಿವು ದೀರ್ಘವಾದುದು. ನನಗೇಕೋ ಸಂಗಂ ಸಾಹಿತ್ಯದಲ್ಲಿ ಅಡಕವಾಗಿರುವ ವಿಚಾರಗಳನ್ನು ತೆಗೆದುಕೊಂಡು, ಸಮಕಾಲೀನತೆಗೆ ಅನ್ವಯಿಸಿಕೊಂಡು ನೃತ್ಯ ಪ್ರಸ್ತುತಪಡಿಸುವುದು ಇಷ್ಟ. ತಂಜಾವೂರು ಶೈಲಿಯನ್ನೇ ಅನುಸರಿಸಿಕೊಂಡು ನಾನು ಈ ಪ್ರಯತ್ನಗಳನ್ನು ಮಾಡಿದ್ದೇನೆ. ಇತ್ತೀಚೆಗೆ ನಾನು ನೃತ್ಯ-ಉಪನ್ಯಾಸ ಕೊಡುವುದನ್ನು ರಸಿಕರು ಇಷ್ಟಪಡುತ್ತಾರೆ. ಅಂದರೆ ಸಾಹಿತ್ಯ ಪ್ರಧಾನವಾದ ಕೃತಿಗಳನ್ನು ತೆಗೆದುಕೊಂಡು ಪರಂಪರೆಯ ಕಥೆಗಳನ್ನು ಕಾವ್ಯಾತ್ಮಕವಾಗಿ ಹೇಳುತ್ತ, ನೃತ್ಯವನ್ನೂ ಪ್ರಸ್ತುತಪಡಿಸುತ್ತ ಪ್ರದರ್ಶನಗಳನ್ನು ಪ್ರಸ್ತುತಪಡಿಸುತ್ತಿದ್ದೇನೆ. ತಮಿಳು ಸಾಹಿತ್ಯ ಸಮ್ಮೇಳನಗಳಲ್ಲಿ ನಾನು ಈ ಉಪನ್ಯಾಸ-ನೃತ್ಯ ಪ್ರದರ್ಶನ ನೀಡಿದ್ದುಂಟು. ಅದು ಸಾಮಾನ್ಯವಾಗಿ ನನ್ನ ಬದುಕಿಗೆ ಹತ್ತಿರವಾದುದೇ ಇರುತ್ತದೆ. 'ಕನಸು ಕಾಣುವುದ ಮರೆಯದಿರಿ...' ಎಂಬ ಶೀರ್ಷಿಕೆಯಡಿ ನಾನು ನನ್ನ ಬದುಕಿನ ಕಥೆಗೇ ಸಾಹಿತ್ಯ ಕೃತಿಗಳನ್ನು ಅಳವಡಿಸಿ ಒಂದು ಪ್ರದರ್ಶನವನ್ನು ಕೊಟ್ಟಿದ್ದುಂಟು. 'ಶಿಲಪ್ಪದಿಕಾರಂ'ನ ಕೆಲವು ಸಾಹಿತ್ಯ ತುಣುಕುಗಳು, ಕಣ್ಣದಾಸನ್ ಅವರ ಕೃತಿಗಳು, ತಿರುವಳ್ವಾ ಅವರ ಕೃತಿಗಳನ್ನು ಆಯ್ದುಕೊಂಡು ನಾನು ಈ ಕನಸುಗಳ ಪ್ರಸ್ತುತಿಯನ್ನು ಸಿದ್ಧಪಡಿಸಿರುವೆ. ಇದಕ್ಕಾಗಿ ನಾನು ತುಂಬಾ ಓದಬೇಕಾಗುತ್ತದೆ. ನೋಟ್ಸ್ ಮಾಡಿಕೊಳ್ಳಬೇಕಾಗುತ್ತದೆ. ಇದೊಂದು ಹೊಸ ವಿಚಾರ ಎಂದು ಹೇಳುವಂತಿಲ್ಲ. ನಮ್ಮ ಪರಂಪರೆಯಲ್ಲಿಯೇ ಇರುವ ಶ್ರೀಮಂತ ವಿಚಾರಗಳನ್ನು ತೆಗೆದುಕೊಂಡು ನಾನು ಈ ವಿಧಾನವನ್ನು ಆಯ್ಕೆ ಮಾಡಿಕೊಂಡಿರುವೆ.

ಭಾರತೀಯ ಕಲಾಪ್ರಕಾರಗಳಲ್ಲಿ ಇದೊಂದು ಸಕಾರಾತ್ಮಕವಾದ ವಿಶೇಷ ಅಂಶ. ಅಂದರೆ ಇಲ್ಲಿ ಬಗೆದಷ್ಟೂ ಹೊಸತನ ಕಾಣಿಸುತ್ತಾ ಹೋಗುತ್ತದೆ.